File No. DPAR/49/STR/2022-DPAR_SERV_RULES_SEC_B-DPAR (Computer No. 960866)

993353

# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 511
2. ಸದಸ್ಯರ ಹೆಸರು : ಶ್ರೀ ಅರವಿಂದ ಕುಮಾರ್ ಅರಳಿ (ವಿಧಾನಸಭೆಯಿಂದ ಚುನಾಯಿತರಾದವರು)
3. ಉತ್ತರಿಸಬೇಕಾದ ದಿನಾಂಕ : 22.12.2022
4. ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಗಳು

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ) | ಸರ್ಕಾರವು ಅಧಿಕಾರಿಗಳನ್ನು ವರ್ಗಾವಣೆ ಮಾಡಿದರೆ ಆ ಅಧಿಕಾರಿಗಳು ವರ್ಗಾವಣೆಯಾದ ಸ್ಥಳಕ್ಕೆ ಹೋಗದೆ ಅದೇ ಹುದ್ದೆ ಸ್ಥಳದಲ್ಲಿ ಹಲವಾರು ತಿಂಗಳುಗಳ ಕಾಲ ಮುಂದುವರೆಯಲು ನಿಯಮದಲ್ಲಿ ಅವಕಾಶವಿದೆಯೇ: | ಪ್ರಸ್ತುತ ಸರ್ಕಾರಿ ನೌಕರರ ವರ್ಗಾವಣೆಗಳನ್ನು ವರ್ಗಾವಣಾ ಮಾರ್ಗಸೂಚಿಗಳನ್ನೊಳಗೊಂಡ ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 22 ಸೇಸೇವ 2013 ದಿನಾಂಕ: 07.06.2013ರನ್ವಯ ನಿಯಂತ್ರಿಸಲಾಗುತ್ತಿದೆ. ಸರ್ಕಾರವು ಅಧಿಕಾರಿಗಳನ್ನು ವರ್ಗಾವಣೆ ಮಾಡಿದ ನಂತರ ನಿರ್ದಿಷ್ಟ ಆದೇಶವನ್ನು ಹೊರಡಿಸದ ಹೊರತು ಆ ಅಧಿಕಾರಿಗಳು ಅದೇ ಹುದ್ದೆ/ಸ್ಥಳದಲ್ಲಿ ಮುಂದುವರೆಯಲು ಅವಕಾಶವಿರುವುದಿಲ್ಲ. |
| ಆ) | ಹಾಗಿದ್ದಲ್ಲಿ, ಅದು ಯಾವ ನಿಯಮದಡಿ ಮುಂದುವರೆಯಲು ಅವಕಾಶವಿದೆ. | |
| ಇ) | ವರ್ಗಾವಣೆಯಾದ ನಂತರ ಅಧಿಕಾರಿಗಳು ಮುಂದುವರೆಯಲು ರಾಜಕೀಯ ವ್ಯಕ್ತಿಗಳು ಸರ್ಕಾರಕ್ಕೆ ಮನವಿ ಸಲ್ಲಿಸಿದ್ದಲ್ಲಿ, ಆ ಅಧಿಕಾರಿಯನ್ನು ಬಿಡುಗಡೆಗೊಳಿಸದೆ ಅದೇ ಸ್ಥಳದಲ್ಲಿ ಮುಂದುವರಿಸಬಹುದೇ: (ವಿವರ ನೀಡುವುದು) | ಸರ್ಕಾರಿ ಅಧಿಕಾರಿ/ನೌಕರರ ವರ್ಗಾವಣೆಗಳಲ್ಲಿ ರಾಜಕೀಯ ಒತ್ತಡ ತರುವುದನ್ನು ನಿಷೇಧಿಸಲಾಗಿದೆ. ರಾಜಕೀಯ ವ್ಯಕ್ತಿಗಳು ಸರ್ಕಾರಕ್ಕೆ ಮನವಿ ಸಲ್ಲಿಸಿರುವ ಕಾರಣಕ್ಕಾಗಿ ಆ ಅಧಿಕಾರಿಯನ್ನು ಬಿಡುಗಡೆಗೊಳಿಸದೇ ಮುಂದುವರೆಸುವ ಬಗ್ಗೆ ಸರ್ಕಾರದಿಂದ ಯಾವುದೇ ಸೂಚನೆ ನೀಡಿರುವುದಿಲ್ಲ. |
| ಈ) | ವರ್ಗಾವಣೆ ರದ್ದುಗೊಂಡ ಆದೇಶವಿಲ್ಲದೆ ಆ ಅಧಿಕಾರಿಗಳು ಬಿಡುಗಡೆಯಾಗದೆ ಹಲವು ತಿಂಗಳು ಅಲ್ಲೆ ಮುಂದುವರೆದು ಯಾವುದಾದರು ಯೋಜನೆಗಳಿಗೆ ಅನುಮೋದನೆ ನೀಡಬಹುದೇ? (ವಿವರ ನೀಡುವುದು) | ಸರ್ಕಾರಿ ಅಧಿಕಾರಿ/ನೌಕರ ಆತನು ಧಾರಣ ಮಾಡಿರುವ ಹುದ್ದೆಯ ಕರ್ತವ್ಯದಿಂದ ಬಿಡುಗಡೆ ಹೊಂದಿದ ನಂತರ ಆ ಹುದ್ದೆಯಲ್ಲಿ ಮುಂದುವರಿಯುವಂತಿಲ್ಲ. |

ಸಂಖ್ಯೆ: ಸಿಆಸುಇ 49 ಸೇಸೇವ 2022

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ.